## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 378 (310) |
| ಸದಸ್ಯರ ಹೆಸರು | : ಶ್ರೀ ವೈ ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.08.2026 |
| ಉತ್ತರಿಸುವ ಸಚಿವರು | : ಉಪ ಮುಖ್ಯಮಂತ್ರಿಗಳು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹೆಮ್ಮಿಗೆಪುರ ಗ್ರಾಮದ ಸ.ನಂ. 43 ರಲ್ಲಿ 1 ಎಕರೆ 06 ಗುಂಟೆ ಸರ್ಕಾರಿ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಿ ಸುಮಾರು ನಾಲ್ಕು ವರ್ಷಗಳಾಗಿದ್ದರೂ ಸಹ ಬೆಂಗಳೂರು ಮಹಾನಗರ ಪಶ್ಚಿಮ ಪಾಲಿಕೆ (ಜಿ.ಬಿ.ಗೆ) ಹಸ್ತಾಂತರಿಸದರಿವುದಕ್ಕೆ ಕಾರಣಗಳೇನು; (ವಿವರಗಳನ್ನು ಒದಗಿಸುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಹೆಮ್ಮಿಗೆಪುರ ಗ್ರಾಮ ಸರ್ವೆ ನಂಬರ್ 43ರಲ್ಲಿ 1-06ಎ/ಗುಂ ಸರ್ಕಾರಿ ಗುಂಡುತೋಪು ಜಮೀನನ್ನು ಸಾರ್ವಜನಿಕ ಸ್ಮಶಾನಕ್ಕಾಗಿ ಸರ್ಕಾರದ ಪತ್ರ ಸಂಖ್ಯೆ: ಆರ್.ಡಿ 4 1 ಎಲ್.ಜಿ.ಬಿ 2023 ದಿನಾಂಕ:12-06-203ರಂತೆ ಗುಂಡು ತೋಪು ಜಮೀನನ್ನು ಸ್ಮಶಾನಕ್ಕಾಗಿ ಕಾಯಿರಿಸಲು ಪೂರ್ವಾನುಮೋದನೆ ನೀಡಲಾಗಿದ್ದು ಅದರಂತೆ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರ ಅಧಿಕೃತ ಜ್ಞಾಪನ ಸಂಖ್ಯೆ: ಎಲ್.ಎನ್.ಡಿ(ಎಸ್)ಸಿಆರ್:69/2022-23, ದಿನಾಂಕ:04-12-2023 ರಂತೆ ಕಾಯ್ದಿರಿಸಿ ಆದೇಶಿಸಲಾಗಿರುತ್ತದೆ.<br><br>ಸದರಿ ಜಮೀನಿಗೆ ಸಂಬಂಧಿಸಿದಂತೆ ಶ್ರೀ ಡಿ.ಟಿ.ಸಂತೋಷ್ ಬಿನ್ ಡಿ.ಸಿ.ತಮ್ಮಣ್ಣ ಇವರು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ Revenue Appeal No:287/2023 ರಂತೆ ಪ್ರಕರಣ ದಾಖಲಿಸಿದ್ದು, ಮಾನ್ಯ ಮೇಲ್ಮನವಿ ನ್ಯಾಯಾಧಿಕರಣವು ದಿನಾಂಕ:18-10-2023ರಂದು ಯಥಾ ಸ್ಥಿತಿ ಕಾಪಾಡಲು ಆದೇಶಿಸಿರುವುದರಿಂದ ಬೆಂಗಳೂರು ಮಹಾನಗರ ಪಶ್ಚಿಮ ಪಾಲಿಕೆ (ಜಿ.ಬಿ.ಎ)ಗೆ ಸದರಿ ಜಮೀನನ್ನು ಹಸ್ತಾಂತರಿಸಿರುವುದಿಲ್ಲ. |
| ಆ) | ಈ ಸ್ಮಶಾನ ಜಮೀನು ಸರ್ಕಾರದ ಸ್ವತ್ತಾಗಿದ್ದರೂ ಸಹ ಖಾಸಗಿ ವ್ಯಕ್ತಿಗಳು ಗ್ರಾಮಸ್ಥರಿಗೆ ತೊಂದರೆ ನೀಡಲು ಮತ್ತು ತಮ್ಮ ಸ್ವಂತ ಹಿತಾಸಕ್ತಿಗಾಗಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುವುದು ಮತ್ತು ಇದಕ್ಕೆ ಪೂರಕವಾಗಿ ಸರ್ಕಾರಿ ಅಧಿಕಾರಿಗಳು ಖಾಸಗಿ ವ್ಯಕ್ತಿಗಳ ಜೊತೆ ಸೇರಿ ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಸಲ್ಲಿಸದೆ ವಿಳಂಬ ಮಾಡುತ್ತಿರುವುದು ಕಂಡುಬರುತ್ತಿದ್ದು ಇದಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು) | ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದಲ್ಲಿ ದಾಖಲಾಗಿರುವ ಪ್ರಕರಣಗಳಿಗೆ ಕಂಡಿವಾರು ಷರಾ ಉತ್ತರವನ್ನು ತಯಾರಿಸಿ ಸಲ್ಲಿಸಿದ್ದು, ಪ್ರಕರಣದಲ್ಲಿ ಯಥಾಸ್ಥಿತಿಯನ್ನು ತೆರವುಗೊಳಿಸಲು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದ್ದು ಈ ಬಗ್ಗೆ ನ್ಯಾಯಾಲಯಕ್ಕೆ ಸೂಕ್ತ ದಾಖಲೆಗಳನ್ನು ಸಲ್ಲಿಸಲು ಯಾವುದೇ ವಿಳಂಬ ಧೋರಣೆಯನ್ನು ಅನುಸರಿಸುತ್ತಿಲ್ಲ. |
| ಇ) | ಸದರಿ ಸ್ಮಶಾನ ಭೂಮಿಯನ್ನು ಹೆಮ್ಮಿಗೆಪುರ ಗ್ರಾಮಸ್ಥರ ಉಪಯೋಗಕ್ಕಾಗಿ ಒದಗಿಸಲು ನ್ಯಾಯಾಲಯದಲ್ಲಿರುವ ಈ ಪ್ರಕರಣವನ್ನು ತ್ವರಿತವಾಗಿ ಬಗೆಹರಿಸಲು ಸರ್ಕಾರದ ಕ್ರಮಗಳೇನು; (ವಿವರ ಒದಗಿಸುವುದು) | |

**ಸಂಖ್ಯೆ: ಆರ್‌ಡಿ 158 ಎಲ್‌ಜಿಕ್ಯೂ 2026**

(ಡಾ: ಜಿ. ಪರಮೇಶ್ವರ )
ಉಪ ಮುಖ್ಯಮಂತ್ರಿಗಳು